

بسم اللهِ الرّحمٰن الرّحيم

**ವಫಾತೆ ಮಸೀಹ್ (ಹ। ಈಸಾ ರ ಮರಣದ) ಪ್ರಶ್ನೆ ಕೇವಲ ಸೈದ್ಧಾಂತಿಕವಾದ ಒಂದು ಪ್ರಶ್ನೆ ಅಲ್ಲ. ಅದು ಏಕದೇವ ವಿಶ್ವಾಸ (ತೌಹೀದ್) ಸ್ಥಾಪಿಸಲು ಅತ್ಯಂತ ಆವಶ್ಯಕವಾದ ಒಂದು ವಿಷಯವಾಗಿದೆ**

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **13-03-2015** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು ವಿವರಿಸಿದ ಕೆಲವು ವಿಷಯಗಳನ್ನು ಪ್ರಸ್ತಾಪಿಸುವೆನು. ಅವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ನೇರವಾಗಿ ಸಂಬಂಧಿಸಿವೆ ಅಥವಾ ಪರೋಕ್ಷವಾಗಿ ಸಂಬಂಧಿಸಿವೆ. ಅವುಗಳಿಂದ ಅನೇಕ ಪಾಠ ಕಲಿಯುವ ವಿಷಯಗಳು ದೊರಕುತ್ತವೆ. ಅವು ಇಂದು ಸಹ ನಮಗೆ ಮಾರ್ಗದರ್ಶಕಗಳಾಗಬಹುದು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳಿದ ಒಂದು ವಿಷಯ ಹೀಗಿದೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಇಸ್ಲಾಮ್ ಧರ್ಮ ಪ್ರಚಾರದ ಬಗ್ಗೆ ಎಂತಹ ನೋವು ಮತ್ತು ಉತ್ಸಾಹ ಇತ್ತೆಂದರೆ ಅವರು ತನ್ನ ಜಮಾಅತಿನ ಜನರಲ್ಲಿ ಸಹ ಅಂತಹ ಸ್ಥಿತಿಯನ್ನು ಕಾಣಲು ಬಯಸುತ್ತಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಧರ್ಮ ಪ್ರಚಾರದ ಬಗ್ಗೆ ವಿಚಿತ್ರ ಯೋಚನೆಗಳನ್ನು ಹೊಂದಿದ್ದರು. ಅವರು ರಾತ್ರಿ ಹಗಲು ಅಂತಹ ಯೋಚನೆಗಳಲ್ಲಿ ಮಗ್ನರಾಗಿರುತ್ತಿದ್ದರು. ಇಸ್ಲಾಮಿನ ಸಂದೇಶ ಲೋಕದ ಮೂಲೆ ಮೂಲೆಗಳಿಗೆ ತಲಪಿಸಬೇಕೆಂದು ಅವರು ಚಿಂತಿಸುತ್ತಿದ್ದರು. ಒಮ್ಮೆ ಅವರು ಹೀಗೆ ಯೋಚಿಸಿದರು– ನಮ್ಮ ಜಮಾಅತಿನ ಜನರ ವೇಷಭೂಷಣ ಬೇರೆಯೇ ಆಗಿರಬೇಕು. ಪ್ರತಿಯೊಬ್ಬನನ್ನು ಅಹ್ಮದಿ ಎಂದು ಗುರುತಿಸುವಂತೆ ಅದು ಇರಬೇಕು.

ಇದರ ಬಗ್ಗೆ ಹೇಳುವುದಾದರೆ, ವೇಷಭೂಷಣ ಮಾತ್ರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಉದ್ದೇಶಿಸಿರಲಿಲ್ಲ. ಉಡುಗೆ ತೊಡುಗೆಯೊಂದಿಗೆ ವಿಶ್ವಾಸ ಮತ್ತು ಕರ್ಮದ ಸ್ಥಿತಿಯನ್ನು ನೋಡಿಕೊಂಡು ಅನ್ಯರು ಅಹ್ಮದಿಯನ್ನು ಗುರುತಿಸುವಂತಿರಬೇಕು. ಅದಲ್ಲದೆ ಅಹ್ಮದಿ ಸಹ ತಾನು ತನ್ನ ವಿಶ್ವಾಸ ಮತ್ತು ಕರ್ಮಗಳನ್ನು ಸರಿಪಡಿಸಿ ಅಹ್ಮದಿ ಎಂದು ಗುರುತಿಸಲ್ಪಡುವಂತಾಗಬೇಕು ಎಂದು ಅವರು ಬಯಸಿದ್ದರು.

ಇಂದಿನ ಕಾಲದಲ್ಲಿ ನಾವು ಇಂತಹ ಮನೋಭಾವನೆ ಹೊಂದಬೇಕಾದುದು ಆವಶ್ಯಕವಾಗಿದೆ. ಪೋಷಾಕು ಮುಖ್ಯವಲ್ಲ. ನಮ್ಮ ಸ್ಥಿತಿ ಹೇಗಿರಬೇಕೆಂದರೆ, ನಾವು ಅನ್ಯರ ಹಾಗೆ ಅಲ್ಲ. ನಾವು ಅಹ್ಮದಿಯರೆಂದು ಗುರುತಿಸಲ್ಪಡುವ ರೀತಿಯಲ್ಲಿರಬೇಕು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ತಬ್ಲೀಗ್ ಮಾಡುವ ಮುಬಲ್ಲಿಗ್ ಒಬ್ಬ ಸತ್ಯವಿಶ್ವಾಸಿಗೆ ಅರ್ಹವಾದ ರೀತಿಯಲ್ಲಿ ವ್ಯಕ್ತಿತ್ವ ಹೊಂದಬೇಕು. ನಾನು ಖುದ್ದಾಮುಲ್ ಅಹ್ಮದಿಯಾದವರಿಗೆ ಹೇಳಲು ಬಯಸುತ್ತೇನೆ– ಅವರ ರೂಪ ಇಸ್ಲಾಮ್ ಧರ್ಮಕ್ಕೆ ಅನುಸಾರವಾಗಿರಬೇಕು. ಅವರು ಗಡ್ಡ, ತಲೆಗೂದಲು ಮತ್ತು ಬಟ್ಟೆಬರೆಗಳಲ್ಲಿ ಸರಳತೆ ಅವಲಂಬಿಸಬೇಕು. ಇಸ್ಲಾಮ್ ಸ್ವಚ್ಛ ಮತ್ತು ಸುಂದರ ಪೋಷಾಕ ಧರಿಸುವುದನ್ನು ತಡೆಯುವುದಿಲ್ಲ. ಇಸ್ಲಾಮ್ ಆಜ್ಞಾಪಿಸುವುದೇನೆಂದರೆ, ನೀವು ಬಾಹ್ಯ ಸ್ವಚ್ಛತೆ ಬಗ್ಗೆ ಗಮನ ಹರಿಸಿರಿ. ಕೊಳಕಿನ ಸಮೀಪ ಸಹ ಹೋಗಬೇಡಿರಿ. ಆದರೆ ಪೋಷಾಕಿನಲ್ಲಿ ಆಡಂಬರ ಪ್ರದರ್ಶಿಸುವುದು ನಿಷಿದ್ಧವಾಗಿದೆ. ಜಮಾಅತಿಗೆ ವಕ್ಫ್ ಮಾಡಿದ ಮುಬಲ್ಲಿಗರಿಗೆ ಇದರಲ್ಲಿ ಪಾಠವಿದೆ. ನಮ್ಮ ಜಮಾಅತಿನ ಇತರರಿಗೆ ಸಹ ಇದರಲ್ಲಿ ಪಾಠವಿದೆ. ನೀವು ನಿಮ್ಮ ವೇಷಭೂಷಣಗಳಿಗೆ ಹೆಚ್ಚಿನ ಗಮನ ಹರಿಸಿ ಮುಖ್ಯ ಉದ್ದೇಶ ಹಿಂದೆ ಸರಿಯುವಂತಾಗಬಾರದು. ಕೆಲವರು ಸ್ವಚ್ಛತೆ ಬಗ್ಗೆ ಗಮನ ಹರಿಸುವುದಿಲ್ಲ. ಸ್ವಚ್ಛತೆ ಸತ್ಯವಿಶ್ವಾಸದ ಒಂದು ಭಾಗವಾಗಿದೆ ಎಂದು ನೆನಪಿಡಬೇಕು. ಎಲ್ಲ ವಿಷಯಗಳಲ್ಲೂ ಸಮತೋಲನ ಸ್ಥಿತಿ ಇರಬೇಕು. ಈ ಕಡೆಗೆ ವಾಲಬಾರದು; ಆ ಕಡೆಗೂ ವಾಲಬಾರದು.

ತಬ್ಲೀಗ್‌ಗೆ ಸಂಬಂಧಿಸಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಘಟನೆ ಹೀಗೆ ವಿವರಿಸುತ್ತಾರೆ: ದೆಹಲಿಯಲ್ಲಿ ತಾಯಿಯವರೊಂದಿಗೆ ನಾನು ಅಜ್ಜಿಯ ಮನೆಯಲ್ಲಿದ್ದಾಗ ಹೈದರಾಬಾದಿನಿಂದ ನಮ್ಮ ಒಬ್ಬ ಸಹೋದರ ಸಂಬಂಧಿ ಅಲ್ಲಿಗೆ ಬಂದರು. ಆ ಸಹೋದರ ಸಂಬಂಧಿ ಹೀಗೆ ಹೇಳಿದರು– ನಿಮ್ಮ ತಂದೆಯವರು ಎಂತಹ ಕೋಲಾಹಲ ಪ್ರಾರಂಭಿಸಿದ್ದಾರೆ. ಇಸ್ಲಾಮಿನ ವಿರುದ್ಧ ಏನೆಲ್ಲ ಹೇಳುತ್ತಿದ್ದಾರೆ. ಆಗ ನನ್ನ ಪ್ರಾಯ ಚಿಕ್ಕದಾಗಿದ್ದರೂ ನಾನು ಗಾಬರಿಗೊಳ್ಳಲಿಲ್ಲ. ವಫಾತೆ ಮಸೀಹ್ ವಿಷಯದ ಬಗ್ಗೆ ನನಗೆ ಚೆನ್ನಾಗಿ ಗೊತ್ತಿತ್ತು. ನಾನು ವಫಾತೆ ಮಸೀಹ್ ಬಗ್ಗೆ ಸವಿವರವಾಗಿ ಆ ಬಂಧುವಿಗೆ ವಿಶದೀಕರಿಸಿದೆ. ಆಗ ಆ ಬಂಧು ಬಹಳ ಆಶ್ಚರ್ಯಗೊಂಡು ಹೇಳಿದರು: ಹಝ್ರತ್ ಈಸಾ ಅಲೈಹಿಸ್ಸಲಾಮ್ ಮೃತರಾಗಿರುವರೆಂದು ನಿಮ್ಮ ಮಾತುಗಳಿಂದ ನನಗೆ ಮನವರಿಕೆ ಆಗಿದೆ. ಆದರೆ ಈ ಮೌಲವಿಗಳು ಈ ರೀತಿ ಬೊಬ್ಬೆ ಹೊಡೆಯುವುದೇಕೆ? ಆಗ ನಾನು ಹೇಳಿದೆ– ನೀವು ಆ ಮೌಲವಿಗಳೊಂದಿಗೆ ಈ ಪ್ರಶ್ನೆ ಕೇಳಿರಿ.

ಆದರೆ ಅಜ್ಜಿ ಆಗ ಬೊಬ್ಬೆ ಹೊಡೆದರು. ಬಂಧುವಿನೊಂದಿಗೆ ಹೇಳಿದರು: **'ತೌಬ ಕರೋ ತೌಬ ಕರೋ'** ಈ ಹುಡುಗನ ತಲೆ ಮೊದಲೇ ಈ ಮಾತುಗಳನ್ನು ಆಲಿಸಿ ಬಿಗಡಾಯಿಸಿದೆ. ನೀನು ಅವನ ಮಾತುಗಳನ್ನು ಅಂಗೀಕರಿಸಿ ಅವನ ಕುಫ್ರ್ ದೃಢಪಡಿಸಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಬ್ಬ ಸಹಾಬಿ (ಶಿಷ್ಯ) ತಬ್ಲೀಗ್ ಮಾಡುತ್ತಿದ್ದ ವಿಧಾನವನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸುತ್ತಾರೆ: ಮಿಯಾಂ ಶೇರ್ ಮುಹಮ್ಮದ್ ಸಾಹೇಬ್ ಅವಿದ್ಯಾವಂತರಾಗಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹಳೆಯ ಸಹಾಬಿಗಳಲ್ಲಿ ಒಬ್ಬರಾಗಿದ್ದರು. ಅವರು ಎಕ್ಕಬಂಡಿ ಚಲಾಯಿಸುತ್ತಿದ್ದರು. ಅವರು ತನ್ನ ಬಂಡಿಯಲ್ಲಿ ಸವಾರಿ ಮಾಡುವ ಜನರೊಂದಿಗೆ ಮಾತನಾಡುತ್ತಾ ಓದು ಬರಹ ಬಲ್ಲವರೊಂದಿಗೆ ತನ್ನ ಕೈಯಲ್ಲಿದ್ದ **"ಅಲ್‌ಹಕಮ್"** ಪತ್ರಿಕೆ ತನಗೆ ಓದಿ ಹೇಳಲು ಹೇಳುತ್ತಿದ್ದರು. ಈ ರೀತಿ ಅವರ ಮೂಲಕ ಒಂದು ಡಜನ್‌ಗಿಂತ ಹೆಚ್ಚು ಜನರು ಅಹ್ಮದಿಯರಾಗಿದ್ದರು.

ತಬ್ಲೀಗ್ ಮಾಡಲು ದೊಡ್ಡ ದೊಡ್ಡ ಚರ್ಚಾ ಕೂಟಗಳನ್ನೂ ವಿಚಾರ ಗೋಷ್ಠಿಗಳನ್ನೂ ಏರ್ಪಡಿಸುವ ಆವಶ್ಯಕತೆ ಇರುವುದಿಲ್ಲ. ಪರಿಸ್ಥಿತಿಗೆ ಅನುಸಾರವಾಗಿ ಪ್ರಚಾರ ವಿಧಾನ ರೂಪಿಸಬಹುದಾಗಿದೆ. ಇಂದಿನ ಕಾಲದಲ್ಲಿ ಸಹ ಅನೇಕ ಅಹ್ಮದಿಯರು ತಮ್ಮದೇ ರೀತಿಗಳಲ್ಲಿ ತಬ್ಲೀಗ್ ಮಾಡುತ್ತಾ ಇದ್ದಾರೆ. ಅಲ್ಲಾಹನ ಅನುಗ್ರಹದಿಂದ ಅವರು ಬಹಳ ಯಶಸ್ಸನ್ನೂ ಗಳಿಸುತ್ತಿದ್ದಾರೆ.

ನಿಝಾಮುದ್ದೀನ್ ಸಾಹೇಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸ್ನೇಹಿತರೂ ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿಯ ಸ್ನೇಹಿತರೂ ಆಗಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಾನು ವಾಗ್ದತ್ತ ಮಹ್‌ದಿ ಮಸೀಹ್ ಎಂದು ವಾದಿಸಿದಾಗ ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ಅವರ ಮೇಲೆ ಕುಫ್ರ್ ಫತ್ವ ಹೊರಡಿಸಿದರು. ಆಗ ನಿಝಾಮುದ್ದೀನ್ ಸಾಹೇಬರಿಗೆ ಬಹಳ ದುಃಖವಾಯಿತು. ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಾತ್ವಿಕತೆ ಬಗ್ಗೆ ದೃಢವಿಶ್ವಾಸವಿತ್ತು. ಅವರು ಲುಧಿಯಾನದಿಂದ ಖಾದಿಯಾನಿಗೆ ಬಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೇಳಿದರು: "ಏನು ನೀವು ಇಸ್ಲಾಮ್ ಪರಿತ್ಯಾಗ ಮಾಡಿರುವಿರೋ? ಪವಿತ್ರ ಖುರ್‌ಆನನ್ನು ನಿರಾಕರಿಸಿರುವಿರೋ?" ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನೀವು ಹೇಳುವಂತಾಗಲು ಹೇಗೆ ತಾನೆ ಸಾಧ್ಯ? ನಾನು ಪವಿತ್ರ ಖುರ್‌ಆನನ್ನು ನಂಬುತ್ತೇನೆ. ಇಸ್ಲಾಮ್ ನನ್ನ ಧರ್ಮವಾಗಿದೆ. ಆಗ ನಿಝಾಮುದ್ದೀನ್ ಸಾಹೇಬರು ಹೇಳಿದರು: ಹಝ್ರತ್ ಈಸಾ ಅಲೈಹಿಸ್ಸಲಾಮ್ ಆಕಾಶಕ್ಕೆ ಜೀವಂತವಾಗಿ ಏರಿಹೋದರೆಂದು ಪವಿತ್ರ ಖುರ್‌ಆನಿನ ಹತ್ತು ವಚನಗಳ ಮೂಲಕ ಸಾಬೀತುಗೊಳಿಸಿದರೆ ನೀವು ನಂಬುವಿರೇನು? ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಕೇವಲ ಒಂದೇ ಒಂದು ಪವಿತ್ರ ಖುರ್‌ಆನ್ ವಚನ ನನಗೆ ತೋರಿಸಿಕೊಟ್ಟರೂ ನಾನು ನಂಬುವೆನು.

ಆ ಸಂದರ್ಭದಲ್ಲಿ ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ಲಾಹೋರಿನಲ್ಲಿದ್ದರು. ಖಲೀಫತುಲ್ ಮಸೀಹ್ ಅವ್ವಲ್ ಸಹ ಅಲ್ಲಿದ್ದರು. ಆಗ ಮೌಲವಿ ಬಟಾಲವಿ ಜೊತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದವಿವಾದ ನಡೆಯುವ ಬಗ್ಗೆ ಚರ್ಚೆ ನಡೆಯುತ್ತಿತ್ತು. ಇಂತಹ ಸಂದರ್ಭದಲ್ಲಿ ನಿಝಾಮುದ್ದೀನ್ ಸಾಹೇಬರು ಅಲ್ಲಿಗೆ ಹೋಗಿ ಹೀಗೆ ಹೇಳಿದರು: ನೀವು ಎಲ್ಲ ಚರ್ಚೆಗಳನ್ನು ಮುಕ್ತಾಯಗೊಳಿಸಿರಿ. ನಾನು ಮಿರ್ಝಾ ಸಾಹೇಬರಿಂದ ವಾಗ್ದಾನ ಪಡೆದು ಬಂದಿದ್ದೇನೆ. ಹಝ್ರತ್ ಈಸಾ ಅಲೈಹಿಸ್ಸಲಾಮ್ ಆಕಾಶಕ್ಕೇರಿ ಹೋದ ಬಗ್ಗೆ ಪವಿತ್ರ ಖುರ್‌ಆನ್‌ನಿಂದ ಹತ್ತು ವಚನಗಳನ್ನು ತೋರಿಸಿದರೆ ಮಿರ್ಝಾ ಸಾಹೇಬರು ಹಝ್ರತ್ ಈಸಾ ಅಲೈಹಿಸ್ಸಲಾಮರು ಜೀವಿಸಿರುವರೆಂದು ನಂಬುವರು.

ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ಬಹಳ ಕೋಪಿಷ್ಠರಾಗಿದ್ದರು. ಅವರು ಹಿಂದೆ ಮುಂದೆ ಯೋಚಿಸದೆ ಮಾತನಾಡುವವರಾಗಿದ್ದರು. ಅವರು ಹೀಗೆ ಹೇಳಿದರು: ಓ ನೀಚ ಮನುಷ್ಯ (ಕಮ್‌ಬಖ್ತ್) ನೀನು ನನ್ನ ಎಲ್ಲ ಕೆಲಸಗಳನ್ನು ಹಾಳುಮಾಡಿದೆ. ನಾನು ಎರಡು ತಿಂಗಳ ಕಾಲ ವಾದಿಸಿ ಮಿರ್ಝಾ ಸಾಹೇಬರನ್ನು ಹದೀಸಿನ ಕಡೆಗೆ ಕರೆದುಕೊಂಡು ಬಂದಿದ್ದೆನು. ಆದರೆ ಈಗ ನೀನು ಅವರನ್ನು ಪವಿತ್ರ ಖುರ್‌ಆನ್ ಕಡೆಗೆ ಕರೆದುಕೊಂಡು ಹೋಗಿರುವೆ.

ನಿಝಾಮುದ್ದೀನ್ ಸಾಹೇಬರು ಹೇಳಿದರು: ಪವಿತ್ರ ಖುರ್‌ಆನಿನ ಹತ್ತು ವಚನಗಳು ಕೂಡ ನಿಮ್ಮ ವಾದವನ್ನು ಬೆಂಬಲಿಸುವುದಿಲ್ಲವಾದರೆ ಪವಿತ್ರ ಖುರ್‌ಆನ್ ಯಾವ ಕಡೆಗಿದೆಯೋ ಆ ಕಡೆಗೆಯೇ ನಾನಿರುವೆನು. ಹೀಗೆ ಹೇಳಿ ಅವರು ಖಾದಿಯಾನಿಗೆ ಬಂದರು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೈಯಲ್ಲಿ ಬೈಅತ್ ಮಾಡಿದರು.

ಪ್ರತಿಯೊಬ್ಬ ಅಹ್ಮದಿ ಯಾವಾಗಲೂ ದೃಢವಾಗಿ ನಂಬಬೇಕಾದುದೇನೆಂದರೆ, ಪವಿತ್ರ ಖುರ್‌ಆನ್, ಅಹ್ಮದಿಯಾ ಜಮಾಅತ್ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೊತೆಗಿದೆ. ಪವಿತ್ರ ಖುರ್‌ಆನಿನ ಬೆಂಬಲವಿರುವ ಕಾರಣದಿಂದಲೇ ಅದು ಪವಿತ್ರ ಪ್ರಕೃತಿಯ ಜನರ ಹೃದಯಗಳನ್ನು ಬೆಳಗಿಸಿ ಜಮಾಅತಿನ ಜನಸಂಖ್ಯೆ ವರ್ಧಿಸುತ್ತಾ ಇರುತ್ತದೆ.

ವಿರೋಧಗಳ ಮೂಲಕ ಸಹ ಸನ್ಮಾರ್ಗ ದೊರಕುತ್ತದೆ ಎನ್ನುವುದನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಘಟನೆ ಹೀಗೆ ವಿವರಿಸುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಭೇಟಿಯಾಗಿ ಒಬ್ಬರು ಬೈಅತ್ ಮಾಡಿದಾಗ ಅವರೊಂದಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕೇಳಿದರು: ನಿಮಗೆ ತಬ್ಲೀಗ್ ಮಾಡಿದುದು ಯಾರು? ಅದಕ್ಕೆ ಉತ್ತರವಾಗಿ ಆ ವ್ಯಕ್ತಿ ಹೇಳಿದರು: ನನಗೆ ತಬ್ಲೀಗ್ ಮಾಡಿದುದು ಮೌಲವಿ ಸನಾಉಲ್ಲಾಹ್ ಸಾಹೇಬರು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಶ್ಚರ್ಯದಿಂದ ಕೇಳಿದರು: ಅದು ಹೇಗೆ? ಅದಕ್ಕೆ ಆ ವ್ಯಕ್ತಿ ಹೀಗೆ ಉತ್ತರ ನೀಡಿದರು:

ನಾನು ಮೌಲವಿ ಸನಾಉಲ್ಲಾಹ್ ಸಾಹೇಬರ ಪತ್ರಿಕೆ ಮತ್ತು ಪುಸ್ತಕಗಳನ್ನು ಓದುತ್ತಿದ್ದೆನು. ಅವುಗಳಲ್ಲಿ ಯಾವಾಗಲೂ ಅಹ್ಮದಿಯಾ ಜಮಾಅತನ್ನು ತೀವ್ರವಾಗಿ ವಿರೋಧಿಸಲಾಗುತ್ತಿತ್ತು. ಅಹ್ಮದಿಯಾ ಜಮಾಅತಿನ ಪುಸ್ತಕಗಳನ್ನು ಸ್ವತಃ ಓದಿ ನೋಡಬೇಕೆಂಬ ಯೋಚನೆ ನಾನು ಹೊಂದಿದೆನು. ನಾನು ಪುಸ್ತಕಗಳನ್ನು ಓದಿದಾಗ ನನ್ನ ಹೃದಯ ತೆರೆಯಿತು. ನಾನು ಬೈಅತ್ ಮಾಡಲು ಸಿದ್ಧನಾದೆನು.

ಅಹ್ಮದಿಯಾದ ನಂತರ ಅಲ್ಲಾಹನು ಅವಿದ್ಯಾವಂತರಾದ ಜನರಿಗೆ ಹೇಗೆ ಬುದ್ಧಿಶಕ್ತಿ ನೀಡುತ್ತಾನೆ ಮತ್ತು ಅವರು ಹೇಗೆ ಎದುರುತ್ತರ ನೀಡುತ್ತಾರೆ ಎಂಬುದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಘಟನೆ ಹೀಗೆ ವಿವರಿಸುತ್ತಾರೆ:

ನಮ್ಮ ಒಬ್ಬ ಸಂಬಂಧಿಕನಾದ ವ್ಯಕ್ತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಪಹಾಸ್ಯ ಮಾಡಲು ತನ್ನನ್ನು **"ಅಸ್ಪೃಶ್ಯರ ಪೀರ್"** ಎಂದು ಪ್ರಕಟಿಸಿದರು. ಕಸಗುಡಿಸುವ ಜನರ ಪೈಕಿ ಕೆಲವರು ಮುಸ್ಲಿಮರಾದರು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಮೀಪ ಬಂದರು. ಅವರು ಅವಿದ್ಯಾವಂತರಾಗಿದ್ದರು. ತಾನು ಅಸ್ಪೃಶ್ಯರ ಪೀರ್ ಎಂದು ಹೇಳಿಕೊಳ್ಳುತ್ತಿದ್ದ ನಮ್ಮ ಚಾಚ ಅವರೊಂದಿಗೆ ಕೇಳಿದರು: ಮಿರ್ಝಾ ಸಾಹೇಬರು ನಿಮಗೆ ಏನು ಕೊಟ್ಟರು? ಆಗ ಆ ಜನರು ಹೇಳಿದರು: ಜನರು ನಮ್ಮನ್ನು ಅಸ್ಪೃಶ್ಯರು ಎಂದು ಕರೆಯುತ್ತಿದ್ದರು. ನಾವು ಮಿರ್ಝಾ ಸಾಹೇಬರೊಂದಿಗೆ ಸಂಬಂಧ ಸ್ಥಾಪಿಸಿದ ಕಾರಣ ನಾವು **"ಮಿರ್ಝಾಯಿ"** ಎಂದು ಕರೆಯಲ್ಪಡುತ್ತೇವೆ. ನಾವು ಅಸ್ಪೃಶ್ಯರಾಗಿದ್ದೆವು; ಮಿರ್ಝಾ ಸಾಹೇಬರ ಕಾರಣ ನಾವು ಮಿರ್ಝಾಯಿಗಳಾದೆವು. ಆದರೆ ಮಿರ್ಝಾ ಕುಟುಂಬಕ್ಕೆ ಸೇರಿದ ನೀವು ಮಿರ್ಝಾ ಸಾಹೇಬರೊಂದಿಗೆ ವಿರೋಧದ ಕಾರಣ ಅಸ್ಪೃಶ್ಯರಾದಿರಿ.

ಅಹ್ಮದಿಯರ ನಿಷ್ಠೆಯ ಅಪ್ರತಿಮ ರೀತಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇಲ್‌ಹಾಮ್ ಈಡೇರುವಂತೆ ಮಾಡುವ ಅಭಿಲಾಷೆ, ಅಹ್ಮದಿಯ್ಯತ್ ಸ್ವೀಕರಿಸಿದ ಕಾರಣ ವಿರೋಧವನ್ನು ಎದುರಿಸಿದುದು, ಅಹ್ಮದಿಯ್ಯತ್ ಕಾರಣ ವಿರೋಧ ಸ್ನೇಹವಾಗಿ ಪರಿಣಮಿಸಿದು, ಇದಕ್ಕೆ ಸಂಬಂಧಿಸಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸುತ್ತಾರೆ:

ಗುಜರಾತ್ ಜಿಲ್ಲೆಯ ಅನೇಕರ ರೂಪ ಈಗ ಸಹ ನನಗೆ ನೆನಪಿದೆ. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೊಂದಿದ ನಿಷ್ಠೆಯ ಕಾರಣ ಅವರ ಇಲ್‌ಹಾಮ್ **"ಯಅ್‌ತೀಕ ಮಿನ್‌ಕುಲ್ಲಿ ಫಜ್ಜಿನ್ ಅಮೀಖ್"** (ನಿನ್ನ ಬಳಿಗೆ ಸಾಮಾಗ್ರಿಗಳು ಕುಳಿಬಿದ್ದ ಮಾರ್ಗಗಳಲ್ಲಿ ತಲಪುವುವು) ಇದನ್ನು ಈಡೇರಿಸಲು ನಡೆದುಕೊಂಡು ಖಾದಿಯಾನಿಗೆ ಆಗಮಿಸುತ್ತಿದ್ದರು. ಹಾಫಿಝ್ ರೋಶನ್ ಅಲಿ ಸಾಹೇಬರು ಒಂದು ಸಂಭವ ಹೀಗೆ ವಿವರಿಸುತ್ತಾರೆ: ಒಂದು ಗುಂಪು ನಡೆದುಕೊಂಡು ಒಂದು ಕಡೆಯಿಂದ ಬರುತ್ತಿತ್ತು. ಇನ್ನೊಂದು ಗುಂಪು ಇನ್ನೊಂದು ಕಡೆಯಿಂದ ನಡೆದುಕೊಂಡು ಬರುತ್ತಿತ್ತು. ಆ ಎರಡು ಗುಂಪುಗಳು ಪರಸ್ಪರ ಭೇಟಿಯಾದಾಗ ಅಳಲು ಪ್ರಾರಂಭಿಸಿದರು. ನಾನು ಅವರೊಂದಿಗೆ ಕೇಳಿದೆ ಏಕೆ ಅಳುತ್ತಿರುವಿರಿ? ಅವರು ಹೇಳಿದರು: ನಮ್ಮ ಪೈಕಿ ಒಂದು ವಿಭಾಗ ಮೊದಲು ಅಹ್ಮದಿಯರಾದ ಕಾರಣ ಇನ್ನೊಂದು ವಿಭಾಗ ಅವರಿಗೆ ಎಷ್ಟು ಕಷ್ಟ ನೀಡಿದರೆಂದರೆ, ಮೊದಲನೆಯ ವಿಭಾಗ ಊರು ಬಿಟ್ಟು ಹೋಯಿತು. ಸ್ವಲ್ಪ ಸಮಯದ ನಂತರ ಅಹ್ಮದಿಯ್ಯತ್ತಿನ ಪ್ರಕಾಶ ನಮ್ಮಲ್ಲಿಯೂ ಹರಡಿತು. ನಾವು ಇಲ್ಲಿಗೆ ತಲಪಿದಾಗ ಆಕಸ್ಮಿಕವಾಗಿ ನಾವು ನಮ್ಮ ಊರಿಂದ ಹೊರ ಹಾಕಿದ ನಮ್ಮ ಸಹೋದರರು ನಮ್ಮ ಮುಂದೆ ಬರುವುದನ್ನು ಕಂಡೆವು. ಆಗ ನಾವು ದುಃಖದಿಂದ ಅಳಲು ತೊಡಗಿದೆವು. ಬೇರೆ ಬೇರೆಯಾದವರನ್ನು ಅಹ್ಮದಿಯ್ಯತಿನ ಅನುಗ್ರಹದಿಂದ ಒಂದಾಗುತ್ತಾರೆ.

ಶೈತಾನನು ಯಾರ ಮಧ್ಯೆ ಒಡಕನ್ನು ಉಂಟು ಮಾಡುತ್ತಾನೋ, ಅಲ್ಲಾಹನ ಅನುಗ್ರಹದಿಂದ ಅಹ್ಮದಿಯ್ಯತ್ ಅವರನ್ನು ಒಗ್ಗೂಡಿಸುತ್ತದೆ. ಇನ್‌ಶಾಅಲ್ಲಾಹ್ ಇಂತಹ ದೃಶ್ಯಗಳನ್ನು ಇನ್ನು ಮುಂದೆ ಸಹ ಕಾಣುವೆವು.

ಮೌಲವಿಗಳು ಮುಸ್ಲಿಮರಲ್ಲಿ ತಪ್ಪು ಅಭಿಪ್ರಾಯ ಉಂಟಾಗುವಂತೆ ಮಾಡುತ್ತಾರೆ. ಹಝ್ರತ್ ಈಸಾ ಅಲೈಹಿಸ್ಸಲಾಮ್ ಪಕ್ಷಿಗಳನ್ನು ಮಾಡಿ ಅವುಗಳಿಗೆ ಜೀವ ಹಾಕುತ್ತಿದ್ದರು ಎಂದು ಮೌಲವಿಗಳು ಹೇಳುತ್ತಾರೆ. ಇಂತಹ ಒಬ್ಬ ಮೌಲವಿಯೊಂದಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಾತನಾಡುತ್ತಾ ಕೇಳಿದರು: ಈಸಾ ಅಲೈಹಿಸ್ಸಲಾಮ್ ಸೃಷ್ಟಿಸಿದ ಪಕ್ಷಿಗಳು ಮತ್ತು ಅಲ್ಲಾಹನು ಸೃಷ್ಟಿಸಿದ ಪಕ್ಷಿಗಳಲ್ಲಿ ಯಾವುವು ಎಂದು ನೀವು ತೋರಿಸಬಲ್ಲಿರೇನು? ಮೌಲವಿ ಹೇಳಿದರು: ಇದು ಈಗ ಬಹಳ ಕಷ್ಟಕರವಾಗಿದೆ. ಅವೆರಡು ಗುಂಪುಗಳು ಪರಸ್ಪರ ಒಟ್ಟಿಗೆ ಆಗಿವೆ. ಅವುಗಳ ಮಧ್ಯೆ ವ್ಯತ್ಯಾಸ ಗುರುತಿಸುವುದು ಅಸಾಧ್ಯ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಹೀಗೆ ಹೇಳಲಾಗುತ್ತಿದೆ: ಅವರು ಕ್ರೈಸ್ತರ ವಿರುದ್ಧ ಕಠಿಣ ಶಬ್ದ ಬಳಸಿದ್ದಾರೆ ಎಂದು. ಆದರೆ ವಾಸ್ತವಿಕ ಸಂಗತಿ ಬೇರೆಯೇ ಆಗಿದೆ. ಅವರು ಎಂದೂ ಕ್ರೈಸ್ತರ ವಿರುದ್ಧ ಮೊದಲು ಆಕ್ಷೇಪ ಮಾಡಿರಲಿಲ್ಲ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಕೆಲವು ಸಾರಿ ವಿಷಯ ಮಿತಿ ಮೀರುತ್ತದೆ. ಆಗ ಉತ್ತರ ನೀಡಬೇಕಾಗುತ್ತದೆ. ಕ್ರೈಸ್ತರು ಯಾವಾಗಲೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ದೂಷಣೆ ಮಾಡುತ್ತಾ ಇದ್ದರು. ಮುಸ್ಲಿಮರು ಉತ್ತರ ನೀಡುತ್ತಿರಲಿಲ್ಲ. ಆದುದರಿಂದ ಕ್ರೈಸ್ತರು ಭಾವಿಸುತ್ತಿದ್ದರು– ಇಸ್ಲಾಮಿನ ಸ್ಥಾಪಕರಲ್ಲಿ ನ್ಯೂನತೆಗಳು ತುಂಬಿವೆ. ಯೇಸು ಮಾತ್ರ ಕಳಂಕರಹಿತರಾಗಿದ್ದಾರೆ. ಕ್ರೈಸ್ತರು ಮುಸ್ಲಿಮರ ಸಭ್ಯತೆ ಬಗ್ಗೆ ತಪ್ಪು ಗ್ರಹಿಕೆ ಹೊಂದಿದ್ದರು. ಅವರು ಹೀಗೆ ಭಾವಿಸುತ್ತಿದ್ದರು: ನಾವು ಕೊಳಕು ಎಸೆಯುವಾಗ ಮುಸ್ಲಿಮರು ಕೊಳಕು ಎಸೆಯುವುದಿಲ್ಲ. ಆದುದರಿಂದ ಮುಸ್ಲಿಮರ ಸರದಾರರು ಕಳಂಕಿತರೇ ಆಗಿದ್ದಾರೆ.

ಕ್ರೈಸ್ತರು ಏಳೆಂಟು ನೂರು ವರ್ಷಗಳ ಕಾಲ ಇಸ್ಲಾಮಿನ ಸ್ಥಾಪಕರ ಮೇಲೆ ಕೊಳಕು ಎಸೆಯುತ್ತಾ ಇದ್ದರು. ಕೊನೆಗೆ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅನುಮತಿ ನೀಡಿದನು. ಕ್ರೈಸ್ತರೊಂದಿಗೆ ಹೇಳು– ನಮಗೆ ನಿಮ್ಮ ಯೇಸುವಿನಲ್ಲಿ ಎಂತಹ ನ್ಯೂನತೆ ಕಾಣಿಸುತ್ತಿವೆ ಎಂದು.

ಕ್ರೈಸ್ತರ ಗ್ರಂಥಗಳಲ್ಲೂ ಯಹೂದಿಯರ ಗ್ರಂಥಗಳಲ್ಲೂ ಯೇಸುವಿನ ಬಗ್ಗೆ ಬರೆಯಲಾದ ಆಕ್ಷೇಪಗಳನ್ನು ಎತ್ತಿಕೊಂಡು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮೂರು ನಾಲ್ಕು ಪುಸ್ತಕಗಳನ್ನು ಬರೆದಾಗ ಕ್ರೈಸ್ತ ಲೋಕ ಪ್ರತಿಭಟಿಸಿತು. ಈ ರೀತಿ ಒಳ್ಳೆಯದಲ್ಲ ಎಂದು ಹೇಳಿತು. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನಾವು ನಿಮ್ಮೊಂದಿಗೆ ಹೇಳಿದೆವು– ನೀವು ಮಾಡುವುದು ಸರಿಯಲ್ಲ. ಆಗ ನೀವು ನಮ್ಮ ಮಾತಿಗೆ ಕಿವಿಗೊಡಲಿಲ್ಲ. ನಿಮ್ಮ ಮೇಲೆ ಆಕ್ರಮಣ ನಡೆದಾಗ ನಿಮಗೆ ಪ್ರಜ್ಞೆ ಉಂಟಾಯಿತು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಉತ್ತರ ರೂಪದಲ್ಲಿ ಕಠಿಣ ಶಬ್ದ ಬಳಸಿದ್ದರು. ಆದರೆ ಅವರು ಆಕ್ಷೇಪವನ್ನು ಮಾಡುವುದರಲ್ಲಿ ಮೊದಲಿಗರಾಗಿರಲಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಪಂಜಾಬಿನ ಒಬ್ಬ ಪ್ರಸಿದ್ಧ ಹಕೀಮರಾಗಿದ್ದ ಹಕೀಮ್ ಅಲ್ಲಾದೀನ್ ಸಾಹೇಬರ ಬಗ್ಗೆ ಹೀಗೆ ಬರೆದಿದ್ದಾರೆ: ಹಕೀಮ್ ಸಾಹೇಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಬಹಳ ಗೌರವ ಭಾವ ಹೊಂದಿದ್ದರು. ಆದರೆ ಅವರ ವಾದಗಳನ್ನು ನಂಬುತ್ತಿರಲಿಲ್ಲ. ಹಕೀಮ್ ಸಾಹೇಬರ ಬಳಿಗೆ ಅಹ್ಮದಿ ಮೌಲವಿ ಫಝ್ಲ್‌ದೀನ್ ಸಾಹೇಬ್ ಭೇರವೀ ಹೋಗಿ ತಬ್ಲೀಗ್ ಮಾಡಿದಾಗ ಹಕೀಮ್ ಸಾಹೇಬರು ಹೇಳಿದರು:

"ನೀವು ವಫಾತೆ ಮಸೀಹ್ ಬಗ್ಗೆ ನನ್ನೊಂದಿಗೆ ಮಾತನಾಡುತ್ತಿರುವಿರಿ. ಆದರೆ ಮಿರ್ಝಾ ಸಾಹೇಬರು ಈ ವಿಷಯವನ್ನು ಎತ್ತಿಹಿಡಿಯಲು ಕಾರಣವೇನೆಂದು ನಿಮಗೆ ತಿಳಿದಿದೆಯೋ? ವಾಸ್ತವಿಕ ವಿಷಯವೇನೆಂದರೆ ಮಿರ್ಝಾ ಸಾಹೇಬರು ಬರಾಹೀನೆ ಅಹ್ಮದಿಯಾ ಗ್ರಂಥ ರಚಿಸಿದರು. ಹದಿನಾಲ್ಕು ನೂರು ವರ್ಷಗಳ ಈ ಕಾಲಾವಧಿಯಲ್ಲಿ ಒಬ್ಬ ಮುಸ್ಲಿಮನೂ ಇಂತಹ ಗ್ರಂಥ ಬರೆದಿಲ್ಲ. ಆದರೆ ಮೌಲವಿಗಳು ಎಂತಹ ಅವಿವೇಕಿಗಳಾಗಿದ್ದಾರೆಂದರೆ, ಮಿರ್ಝಾ ಸಾಹೇಬರಿಗೆ ಕೃತಜ್ಞತೆ ಅರ್ಪಿಸುವುದಕ್ಕೆ ಬದಲಾಗಿ ಅವರ ಮೇಲೆ ಕುಫ್ರ್ ಫತ್ವ ಹೊರಡಿಸಿದರು. ಇಸ್ಲಾಮಿಗೆ ಮಿರ್ಝಾ ಸಾಹೇಬರು ಅರ್ಪಿಸಿದ ಭವ್ಯ ಸೇವೆಯನ್ನು ನೋಡಿದರೂ ಅವರ ವಿರುದ್ಧ ಕುಫ್ರ್ ಫತ್ವ ಹೊರಡಿಸಿದರು ಮತ್ತು ತಮ್ಮ ಜ್ಞಾನದ ಬಗ್ಗೆ ಹೆಮ್ಮೆಪಡಲು ತೊಡಗಿದರು. ಆಗ ಮಿರ್ಝಾ ಸಾಹೇಬರಿಗೆ ಸಿಟ್ಟು ಬಂತು. ಮಿರ್ಝಾ ಸಾಹೇಬರು ಹೇಳಿದರು: ನೀವು ಬಹಳ ವಿದ್ವಾಂಸರೆಂದು ಹೇಳಿಕೊಳ್ಳುತ್ತಿರುವಿರಿ. ಈಸಾ ಮಸೀಹರು ಜೀವಿಸಿರುವರೆಂದು ಸಾಬೀತಾಗಿರುವಾಗ ಅದರ ವಿರುದ್ಧ ಅವರು ಮೃತರಾಗಿರುವರೆಂದು ಸಾಬೀತುಗೊಳಿಸುವುದು ಅಸಾಧ್ಯವೇ ಆಗಿದೆ. ಆದರೆ ನಾನು ಪವಿತ್ರ ಖುರ್‌ಆನ್ ಮೂಲಕ ಅದನ್ನು ಸಾಬೀತುಗೊಳಿಸುವೆನು. ನಿಮಗೆ ಧೈರ್ಯವಿದ್ದರೆ ಖಂಡಿಸಿರಿ.

"ಹೀಗೆ ಮಿರ್ಝಾ ಸಾಹೇಬರು ಮೌಲವಿಗಳಿಗೆ ಅವರ ಅವಿವೇಕತನವನ್ನು ತೋರಿಸಿಕೊಡಲು ವಫಾತೆ ಮಸೀಹ್ ಪ್ರಶ್ನೆಯನ್ನು ಎತ್ತಿಹಿಡಿದರು. ಮತ್ತು ಪವಿತ್ರ ಖುರ್‌ಆನ್ ಮೂಲಕ ಸಾಬೀತುಗೊಳಿಸಲು ಪ್ರಾರಂಭಿಸಿದರು."

ಹಕೀಮ್ ಸಾಹೇಬ್ ಹೇಳುತ್ತಾರೆ: "ಇದಕ್ಕೆ ಪರಿಹಾರವೇನೆಂದರೆ, ವಫಾತೆ ಮಸೀಹ್ ಎಂಬ ಪ್ರಶ್ನೆಯೇ ಇಲ್ಲ. ಮಸೀಹ್ ಜೀವಿಸಿದ್ದಾರೆ. ಎಲ್ಲ ಮೌಲವಿಗಳು ಒಗ್ಗೂಡಿ ಮಿರ್ಝಾ ಸಾಹೇಬರ ಬಳಿಗೆ ಹೋಗಿ, ನಾವು ನಿಮ್ಮ ವಿರುದ್ಧ ಕುಫ್ರ್ ಫತ್ವ ಹೊರಡಿಸಿ ನಿಮ್ಮ ಗೌರವಕ್ಕೆ ಕುಂದುಂಟುಮಾಡಿದ್ದೇವೆ. ನಮ್ಮನ್ನು ಕ್ಷಮಿಸಿರಿ ಎಂದು ಹೇಳಬೇಕು. ಆಗ ನೀವು ನೋಡಿರಿ, ಮಿರ್ಝಾ ಸಾಹೇಬರು ಪವಿತ್ರ ಖುರ್‌ಆನ್‌ನಿಂದಲೇ ಮಸೀಹ್ ಜೀವಿಸಿರುವ ಬಗ್ಗೆ ಪುರಾವೆ ನೀಡುವರೋ ಇಲ್ಲವೋ ಎಂದು." ಈ ರೀತಿ ಹಕೀಮ್ ಸಾಹೇಬರು ವ್ಯಾಖ್ಯಾನಿಸಿದರು.

ಹಕೀಮ್ ಸಾಹೇಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಗೌರವಿಸುತ್ತಿದ್ದರೂ ಈಸಾ ಮಸೀಹರು ಜೀವಿಸಿರುವ ಬಗ್ಗೆ ಎಷ್ಟು ದೃಢ ವಿಶ್ವಾಸ ಹೊಂದಿದ್ದರೆಂದರೆ, ಅವರು ಬೈಅತ್ ಮಾಡಲಿಲ್ಲ.

ಈ ಕಾಲಘಟ್ಟದ ಇಮಾಮರನ್ನು ನಂಬುವ ಭಾಗ್ಯ ದೊರಕುವುದು ಅಲ್ಲಾಹನ ಅನುಗ್ರಹವಾಗಿದೆ. ನಾವು ಯಾವಾಗಲೂ ನೆನಪಿಡಬೇಕಾದುದೇನೆಂದರೆ, ವಫಾತೆ ಮಸೀಹ್ ಪ್ರಶ್ನೆ ಕೇವಲ ಸೈದ್ಧಾಂತಿಕವಾದುದಲ್ಲ ಅದು ಏಕದೇವ ವಿಶ್ವಾಸ ಸ್ಥಾಪಿಸಲು ಅತ್ಯಂತ ಆವಶ್ಯಕವಾದುದಾಗಿದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: ಒಮ್ಮೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಒಬ್ಬರು ಹೀಗೆ ಹೇಳಿದರು– ಹುಝೂರ್, ನೀವು ಈ ಪ್ರಶ್ನೆಯನ್ನು ಈಗ ಬಿಟ್ಟುಬಿಡಿರಿ.

ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಭಾವೋದ್ವೇಗಭರಿತರಾಗಿ ಹೇಳಿದರು: ನನಗೆ ಈ ವಿಷಯದ ಬಗ್ಗೆ ಎಂತಹ ಭಾವಾವೇಶ ಉಂಟಾಗುತ್ತದೆ ಎಂದರೆ ನನಗೆ ಪ್ರಾಯಶಃ ಹುಚ್ಚು ಹಿಡಿಯದಿರಲಿ ಎಂದಾಗುತ್ತದೆ. ಈಸಾ ಅಲೈಹಿಸ್ಸಲಾಮ್ ಜೀವಿಸಿರುವರೆಂಬ ವಿಶ್ವಾಸ ಇಸ್ಲಾಮಿಗೆ ತೀವ್ರ ಹಾನಿ ಉಂಟುಮಾಡಿದೆ. ಈ ವಿಶ್ವಾಸವನ್ನು ಪುಡಿಪುಡಿಗೊಳಿಸುವ ತನಕ ನಾವು ಸುಖವಾಗಿ ಶ್ವಾಸೋಚ್ಛ್ವಾಸ ಮಾಡಲಾರೆವು.

ಕೆಲವರು ಹೇಳುತ್ತಾರೆ– ಇದೇನು ಪ್ರಶ್ನೆ ಎಂದು. ಆದರೆ ಇದು ಏಕದೇವ ವಿಶ್ವಾಸದ ಮಾರ್ಗದಲ್ಲಿರುವ ತಡೆಯಾಗಿದೆ. ಇದನ್ನು ದೂರ ಸರಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇಷ್ಟು ಉತ್ಸಾಹಭರಿತರಾಗಿದ್ದರು. ಇದೇ ಉತ್ಸಾಹ ಅಲ್ಲಾಹನ ಅನುಗ್ರಹವನ್ನು ಸೆಳೆಯಿತು ಮತ್ತು ಸತ್ಯಕ್ಕೆ ಅಸ್ತಿಭಾರ ಹಾಕಿತು. ಒಬ್ಬನ ಹೃದಯದಲ್ಲಿ ಅಲ್ಲಾಹನ ಬಗ್ಗೆ ಪ್ರೀತಿ ಮತ್ತು ಇಸ್ಲಾಮ್ ಹರಡಲು

ಭಾವೋದ್ವೇಗವಿದ್ದರೆ, ಅವನು ಅರ್ಥ ಮಾಡಿಕೊಳ್ಳಬಲ್ಲನು– ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹೃದಯದಲ್ಲಿದ್ದ ಅಗ್ನಿಯ ಒಂದು ಕೆಂಡ ಮಾತ್ರ ಈ ಸಮಸ್ಯೆಯಾಗಿದೆ ಎಂದು.

ನಮ್ಮ ಎಲ್ಲ ಪ್ರಯತ್ನಗಳು ಈ ಬಿಂದುವಿನ ಸುತ್ತು ಚಲಿಸುತ್ತಿರಬೇಕು ಮತ್ತು ಅದರಲ್ಲಿಯೇ ಅಡಕವಾಗಿರಬೇಕು. ನಾವು ಇದನ್ನು ಮನವರಿಕೆ ಮಾಡದಿದ್ದರೆ ನಾವು ಬಾಹ್ಯವಾಗಿ ಏಕದೇವ ವಿಶ್ವಾಸಿಗಳಾಗಿದ್ದು ವಾಸ್ತವಿಕವಾಗಿ ಬಹುದೇವಾರಾಧಕರಾಗುವೆವು. ಏಕದೇವ ವಿಶ್ವಾಸಿಗಳಾಗಿದ್ದು ಬಹುದೇವಾರಾಧನೆ ನಡೆಯುವುದು ಹೇಗೆ? ಇದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಜನರು **ವಹ್‌ದಾನಿಯ್ಯತ್** ತನಕ ಹೋಗುತ್ತಾರೆ. **ಅಹ್‌ದಿಯ್ಯತ್** ತನಕ ಹೋಗುವುದಿಲ್ಲ. ಇವೆರಡು ಶಬ್ದಗಳನ್ನು ಅರ್ಥ ಮಾಡಬೇಕು. **ವಹ್‌ದಾನಿಯ್ಯತ್** ಎಂದರೆ ಗುಣ ವಿಶೇಷಗಳಲ್ಲಿ ಏಕನಾದದು. ಅಲ್ಲಾಹನ ಗುಣವಿಶೇಷಗಳು ಸ್ವಲ್ಪಮಟ್ಟಿಗೆ ಮನುಷ್ಯರಲ್ಲಿಯೂ ಪ್ರತಿಬಿಂಬಿಸಬಹುದು. ಅದರ ಅತ್ಯುತ್ತಮ ಉದಾಹರಣೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಾಗಿದ್ದಾರೆ. ಆದರೆ ಗುಣವಿಶೇಷದಲ್ಲಿ ಪರಿಪೂರ್ಣತೆ ಇರುವುದು ಅಲ್ಲಾಹನಿಗೆ ಮಾತ್ರವಾಗಿದೆ. **ಅಹದ್** ಎಂದರೆ ಅಲ್ಲಾಹನು ಒಬ್ಬನೇ ಆಗಿರುವುದಾಗಿದೆ. **ಅಹದ್** ಎದುರಿಗೆ ಬೇರೊಂದು ಇರುವುದಿಲ್ಲ. ನಾವು **ಅಹ್‌ದಿಯ್ಯತ್** ಏಕತ್ವದ ವಾಸ್ತವಿಕತೆಯನ್ನು ಮನವರಿಕೆ ಮಾಡಿದರೆ ನಾವು ತೌಹೀದ್‌ನಲ್ಲಿ ನೆಲೆಗೊಳ್ಳುವೆವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಉದ್ದೇಶವನ್ನು ಈಡೇರಿಸುತ್ತಾ ವಾಸ್ತವಿಕ ತೌಹೀದನ್ನು ಸ್ಥಾಪಿಸುವ ಭಾಗ್ಯ ಅಲ್ಲಾಹು ನಮಗೆ ದೊರಕಿಸಲಿ – ಆಮೀನ್.

---------------*****--------------

*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 13-03-2015.*

Summarized by ***Nazarath Nashr-O-Isha'ath, Qadian***

***Kannada Translation:*** M. Ubeidullah for Kannada Desk, Qadian

***Reviewed by:*** Muhammad Yusuf | ***Typing:*** U Basheer Ahmad

*Published By:* **Kannada Isha'at Team** for **Nazarath Nashr-O-Isha'ath, Qadian**

***Email**: khutuba.kannada@gmail.com*